**C**

**SL. No. : P**

**CCE PR**
**REVISED**

ಒಟ್ಟು ಪ್ರಶ್ನೆಗಳ ಸಂಖ್ಯೆ : 57 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8

Total No. of Questions : 57 ] [ Total No. of Printed Pages : 8

**ಸಂಕೇತ ಸಂಖ್ಯೆ : 33-K** **Code No. : 33-K**

# ವಿಷಯ : ದ್ವಿತೀಯ ಭಾಷೆ — ಕನ್ನಡ

# Subject : Second Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

ದಿನಾಂಕ : 26. 06. 2018 ] [ Date : 26. 06. 2018

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-15 ರವರೆಗೆ ] [ Time : 9-30 A.M. to 12-15 P.M.

ಗರಿಷ್ಠ ಅಂಕಗಳು : 100 ] [ Max. Marks : 100

***ಪರೀಕ್ಷಾರ್ಥಿಗಳಿಗೆ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 57 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**



https://www.karnatakaboard.com/

## ವಿಭಾಗ – 'ಎ'

### ಪಠ್ಯಗಳ ಅಧ್ಯಯನ (ಗದ್ಯ, ಪದ್ಯ, ಪೋಷಕ ಅಧ್ಯಯನ)

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ :** 14 × 1 = 14

1. ಗಿಳಿಯನ್ನು ಕಂಡ ಇಂದ್ರನಿಗೆ ಆಶ್ಚರ್ಯವಾದದ್ದು ಏಕೆ ?
2. ಈ ನಾಡಿನ ಬೆನ್ನೆಲುಬು ಯಾರು ?
3. ಸಸ್ತನಿಗಳ ಆಶ್ರಯದಾಣಗಳು ಯಾವುವು ?
4. ಹೆಡ್ ಮಾಸ್ತರರು ಸಂತೋಷಗೊಂಡದು ಏಕೆ ?
5. ಲಂಡನ್ ಭೂ ವಿಸ್ತೀರ್ಣ ಎಷ್ಟು ?
6. ಲಂಡನ್‌ನಲ್ಲಿರುವ ಪ್ರಸಿದ್ಧ ವಿಶ್ವವಿದ್ಯಾಲಯಗಳು ಯಾವುವು ?
7. ಗೋಪಾಲನ ಬೆಳಗಿನ ಮುಖ್ಯ ಕೆಲಸ ಯಾವುದಾಗಿತ್ತು ?
8. ಬನದ ಗೋಪಾಲ ಯಾರು ?
9. ಸಿದ್ಧಾರ್ಥನು ಕಾಡಿನಿಂದ ನಾಡಿನತ್ತ ಏಕೆ ಹೊರಟನು ?
10. ಕಾಡನ್ನು ಅಲೆದ ಸಿದ್ಧಾರ್ಥನಿಗೆ ಹೊಳೆದುದ್ದೇನು ?
11. ನಮ್ಮ ಕರ್ತವ್ಯಗಳನ್ನು ಹೇಗೆ ಮುಗಿಸಬೇಕೆಂದು ಕವಿ ಹೇಳಿದ್ದಾರೆ ?
12. ಮನಸ್ಸು ಅಳಿಯಾಸೆಗಳ ಸುಳಿಗೆ ಸಿಲುಕಬಾರದು ಏಕೆ ?
13. ಕುಣಿಗಲ್ ಕೆರೆಯು ಯಾವ ದಿಕ್ಕಿನಲ್ಲಿದೆ ?
14. ಧನವಿದ್ದವರಲ್ಲಿ ಇರಬೇಕಾದ ಗುಣ ಯಾವುದು ?

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 15 × 2 = 30

15. ಮರವನ್ನು ಬಿಟ್ಟುಹೋಗದೆ ಇರಲು ಗಿಳಿಯು ನೀಡಿದ ಸಮರ್ಥನೆ ಏನು ?
16. ಬಾಲಕ ಪುಟ್ಟಯ್ಯ ಪಂಚಾಕ್ಷರಿ ಗವಾಯಿಗಳ ಶಿಷ್ಯನಾದುದು ಹೇಗೆ ?
17. ಬಾಲಕ ಪುಟ್ಟಯ್ಯ ಕಣ್ಣುಗಳನ್ನು ಕಳೆದುಕೊಂಡದ್ದು ಹೇಗೆ ?
18. ಪುಟ್ಟರಾಜ ಗವಾಯಿಗಳು ಯಾವ ಯಾವ ವಿದ್ಯೆಗಳಲ್ಲಿ ನಿಷ್ಣಾತರಾದರು ?
19. ಹಕ್ಕಿಗೂಡಿನ ವಿಶೇಷತೆಗಳಾವುವು ?
20. ಹಕ್ಕಿಗಳು ಗೂಡನ್ನು ಎಲ್ಲೆಲ್ಲಿ ಕಟ್ಟಬಲ್ಲವು ?
21. ಭಗವಂತ ಕೊಟ್ಟ ಈ ಬದುಕನ್ನು ಯಾವ ರೀತಿ ನಡೆಸಬೇಕೆಂದು ಗುರುಗಳು ಹೇಳಿದರು ?



https://www.karnatakaboard.com/

22. ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಕಾಡಿನ ತುಂಬ ಪ್ರೀತಿ ಹೇಗೆ ತುಂಬಿಕೊಂಡಿತು ?

23. ಮಾನವನ ಬದುಕು ಕರ್ಪೂರದಂತೆ ಇರಬೇಕು ಏಕೆ ?

24. ಕುಣಿಗಲ್ ಕೆರೆಯ ಬಾಳಮೀನುಗಳು ಬೊಬ್ಬೆ ಹೊಡೆಯಲು ಕಾರಣವೇನು ?

25. ಬಸವಣ್ಣನವರು ಜನರ ಧಾರ್ಮಿಕ ನಂಬಿಕೆಗಳನ್ನು ಏಕೆ ಖಂಡಿಸಿದ್ದಾರೆ ?

26. 'ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ' – ಎಂಬ ಅಕ್ಕಮಹಾದೇವಿಯವರ ಮಾತಿನ ಅರ್ಥವೈಶಿಷ್ಟ್ಯವೇನು ?

27. ಶತ್ರು ಬಲಕೆ ನಮೋ ಎಂದು ಉತ್ತರನು ಏಕೆ ಹೇಳಿದನು ?

28. ವೈದ್ಯರು ಭೀಮನಾಯಕನ ಮಗುವಿನ ಪ್ರಾಣವನ್ನು ಹೇಗೆ ಉಳಿಸಿದರು ?

29. ಈ ಲೋಕವು ಯಾವ ರೀತಿ ಸಂತೋಷದಾಯಕವಾಗಿದೆ ಎಂದು ಹೊಂಗೆ ಬೇವುಗಳ ಹಾಡು ಪದ್ಯದಲ್ಲಿ ಹೇಳಲಾಗಿದೆ ?

30. **ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** 1 × 3 = 3

ಯುಗದ ಹಿಂದಿನ ..........................................................

..........................................................................

..........................................................................

................................................................ ಸವಿಚೈತ್ರವು.

***ಅಥವಾ***

ಕೊರಡ ಕೊನರಿಸಿ ......................................................

..........................................................................

..........................................................................

................................................................ ಮತ್ತೇರಿದೆ.

**ಈ ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** 2 × 3 = 6

31. ಕುವೆಂಪು

32. ಎಂ. ಗೋಪಾಲಕೃಷ್ಣ ಅಡಿಗ

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭಸಹಿತ ಸ್ವಾರಸ್ಯವನ್ನು ಬರೆಯಿರಿ :** 4 × 3 = 12

33. "ಇಂಥಾ ಒಣಮರದಲ್ಲಿ ಏಕೆ ವಾಸ ಮಾಡುತ್ತಿದ್ದೀಯ ?"

34. ಲಂಡನ್ ಮಲಗಿ ನಿದ್ರಿಸುತ್ತದೆಯೇ ಅನಿಸುತ್ತದೆ.

35. "ನಾನೂ ನೋಡುತ್ತೇನೆ ಹೇಗೆ ಇಳಿಯುತ್ತಾರೆಂದು."

36. ದಾಳಿ ಬಂದೊಡನೆ ಶರಣೆಂಬ ಹೆಣ್ತನವು



https://www.karnatakaboard.com/

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** $2 \times 4 = 8$

37. ದೇಶದ ಬಜೆಟ್‌ನಲ್ಲಿ ರಕ್ಷಣಾ ಇಲಾಖೆಗೆ ಹೆಚ್ಚಿನ ಹಣವನ್ನು ಏಕೆ ಮೀಸಲಾಗಿಡುತ್ತದೆ ? ವಿವರಿಸಿ.

*ಅಥವಾ*

ದೇಶದ ಪ್ರಗತಿಯಲ್ಲಿ ಸಾಹಿತಿಗಳ ಪಾತ್ರವೇನು ಎಂಬುದನ್ನು ಅಸಿ–ಮಸಿ–ಕೃಷಿ ಪಾಠವನ್ನು ಆಧರಿಸಿ ವಿವರಿಸಿ.

38. ಅರ್ಜುನ ಮತ್ತು ಉತ್ತರ ಕುಮಾರ ಇವರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವರ್ಣನಾತ್ಮಕವಾಗಿ ಬರೆಯಿರಿ.

*ಅಥವಾ*

ಅರ್ಜುನ ಮತ್ತು ಉತ್ತರ ಕುಮಾರ ಇವರ ಗುಣಸ್ವಭಾವದಲ್ಲಿಯ ವ್ಯತ್ಯಾಸಗಳನ್ನು ಬರೆಯಿರಿ.

**ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :** $4 \times 1 = 4$

ಪುರಂದರದಾಸರು ಕ್ರಿ.ಶ. ಹದಿನಾರನೆಯ ಶತಮಾನದಲ್ಲಿ ಬಾಳಿದವರು. ಆಗರ್ಭ ಶ್ರೀಮಂತರಾಗಿದ್ದ ಇವರು ಯಾವುದೋ ಒಂದು ಸನ್ನಿವೇಶದಲ್ಲಿ ವೈರಾಗ್ಯವನ್ನು ತಾಳಿ ಹರಿದಾಸರಾದರೆಂಬ ಪ್ರತೀತಿಯಿದೆ. ಇವರ ಮೊದಲಿನ ಹೆಸರು ಕೃಷ್ಣಪ್ಪನಾಯಕ ಅಥವಾ ವರದಪ್ಪನಾಯಕ ಅಥವಾ ಶ್ರೀನಿವಾಸನಾಯಕ ಎಂದು ಬೇರೆ ಬೇರೆಯಾಗಿ ಪ್ರಚಲಿತವಾಗಿದೆ. ಇವರು ಕೀರ್ತನೆಗಳನ್ನಲ್ಲದೆ ಸುಳಾದಿ, ಉಗಾಭೋಗಗಳನ್ನೂ ರಚಿಸಿದಾರೆ. ಹರಿನಾಮಸ್ಮರಣೆ, ಅಂತರಂಗ ನಿವೇದನೆ, ಕೃಷ್ಣಲೀಲೆ, ಸಮಾಜ ವಿಮರ್ಶೆ ಹೀಗೆ ಇವರ ಕೀರ್ತನೆಗಳ ವಸ್ತು ವೈವಿಧ್ಯಮಯವಾಗಿದೆ. ಲಕ್ಷಾಂತರ ಕೀರ್ತನೆಗಳನ್ನು ಬರೆದಿರುವರೆಂಬ ನಂಬಿಕೆಯಿದ್ದರೂ ಸಿಕ್ಕಿರುವ ಇವರ ರಚನೆಗಳು ಸುಮಾರು ಒಂದು ಸಾವಿರ. ಕರ್ನಾಟಕ ಸಂಗೀತದ ಬುನಾದಿಯಾದ ಪಿಳ್ಳಾರಿ ಗೀತೆಗಳನ್ನು ಪುರಂದರದಾಸರು ಬರೆದಿದ್ದಾರೆ. ಆದ್ದರಿಂದ ಸಂಗೀತ ಪ್ರಿಯರು ಇವರನ್ನು 'ಕರ್ನಾಟಕ ಸಂಗೀತ ಪಿತಾಮಹ' ಎಂದು ಕರೆಯುತ್ತಾರೆ. 'ದಾಸರೆಂದರೆ ಪುರಂದರದಾಸರಯ್ಯ' ಎಂದು ತಮ್ಮ ಗುರು ವ್ಯಾಸರಾಯರಿಂದ ಹೊಗಳಿಸಿಕೊಂಡ ಭಕ್ತ ಶ್ರೇಷ್ಠರು.

*ಪ್ರಶ್ನೆಗಳು :*

39. ಪುರಂದರದಾಸರನ್ನು ಸಂಗೀತ ಪ್ರಿಯರು ಏನೆಂದು ಕರೆಯುತ್ತಾರೆ ?

40. ಪುರಂದರದಾಸರು ಎಷ್ಟನೇ ಶತಮಾನದಲ್ಲಿ ಬಾಳಿದವರು ?

41. ಪುರಂದರದಾಸರಿಗೆ ಪ್ರಚಲಿತವಾಗಿರುವ ಬೇರೆ ಬೇರೆ ಹೆಸರುಗಳಾವುವು ?

42. ಪುರಂದರದಾಸರ ಗುರುಗಳು ಯಾರು ?



https://www.karnatakaboard.com/

## ವಿಭಾಗ – 'ಬಿ'

### (ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** 12 × 1 = 12

43. 'ಜ್ಞಾನ' ಈ ಪದದ ವಿರುದ್ಧಾರ್ಥಕ ಪದ

(ಎ) ವಿಜ್ಞಾನ (ಬಿ) ಅಜ್ಞಾನ

(ಸಿ) ಪರಿಜ್ಞಾನ (ಡಿ) ಸುಜ್ಞಾನ

44. 'ಹೆಜ್ಜೇನು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ

(ಎ) ದ್ವಿಗು ಸಮಾಸ (ಬಿ) ಅಂಶಿ ಸಮಾಸ

(ಸಿ) ದ್ವಂದ್ವ ಸಮಾಸ (ಡಿ) ಕರ್ಮಧಾರಯ ಸಮಾಸ

45. 'ಪುಸ್ತಕದಲ್ಲಿ' ಈ ಪದದ ವಿಭಕ್ತಿ

(ಎ) ಸಪ್ತಮೀ (ಬಿ) ಪ್ರಥಮಾ

(ಸಿ) ಷಷ್ಠೀ (ಡಿ) ದ್ವಿತೀಯಾ

46. 'ವನಜಮುಖಿ' ಪದ ಈ ಅಲಂಕಾರಕ್ಕೆ ಉದಾಹರಣೆಯಾಗಿದೆ

(ಎ) ಉಪಮಾಲಂಕಾರ (ಬಿ) ಶಬ್ದಾಲಂಕಾರ

(ಸಿ) ರೂಪಕಾಲಂಕಾರ (ಡಿ) ದೃಷ್ಟಾಂತಾಲಂಕಾರ

47. 'ಕಟ್ಟಕಡೆ' ಎಂಬುದು ಇದಕ್ಕೆ ಉದಾಹರಣೆ

(ಎ) ಅನುಕರಣಾವ್ಯಯ (ಬಿ) ಜೋಡುನುಡಿ

(ಸಿ) ಸರ್ವನಾಮ (ಡಿ) ದ್ವಿರುಕ್ತಿ

48. 'ವರ್ಷ' ಪದದ ತದ್ಭವರೂಪ ಪದ

(ಎ) ಹರುಷ (ಬಿ) ವರುಷ

(ಸಿ) ಬರ್ಷ (ಡಿ) ಸ್ಪರ್ಶ



https://www.karnatakaboard.com/

49. 'ಮಹಾನುಭಾವ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

(ಎ) ಸವರ್ಣದೀರ್ಘ ಸಂಧಿ (ಬಿ) ಯಣ್ ಸಂಧಿ

(ಸಿ) ಅನುನಾಸಿಕ ಸಂಧಿ (ಡಿ) ವೃದ್ಧಿ ಸಂಧಿ

50. 'ಮುಡುಪು' ಈ ಪದದ ಅರ್ಥ

(ಎ) ಕಣ್ಣೀರು (ಬಿ) ಮನಸ್ಸು

(ಸಿ) ಮೀಸಲು (ಡಿ) ಬಂಗಾರ

51. ತ್ರಿಪದಿ ಪದ್ಯದಲ್ಲಿರುವ ಸಾಲುಗಳ ಸಂಖ್ಯೆ

(ಎ) ಮೂರು (ಬಿ) ಆರು

(ಸಿ) ಐದು (ಡಿ) ನಾಲ್ಕು

52. 'ಕತ್ತಿಮಸೆ' ಎಂಬುದು ಇದಕ್ಕೆ ಉದಾಹರಣೆ

(ಎ) ದ್ವಿರುಕ್ತಿ (ಬಿ) ಜೋಡುನುಡಿ

(ಸಿ) ಅನುಕರಣಾವ್ಯಯ (ಡಿ) ನುಡಿಗಟ್ಟು

53. ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕ ಅಕ್ಷರಗಳ ಸಂಖ್ಯೆ

(ಎ) ಹದಿಮೂರು (ಬಿ) ಇಪ್ಪತ್ತೈದು

(ಸಿ) ಐದು (ಡಿ) ಹತ್ತು

54. 'ಬಡಗಣ' ಪದವು ಈ ನಾಮಪದಗಳ ಗುಂಪಿಗೆ ಸೇರುತ್ತದೆ

(ಎ) ಸಂಖ್ಯಾವಾಚಕ (ಬಿ) ದಿಗ್ವಾಚಕ

(ಸಿ) ಗುಣವಾಚಕ (ಡಿ) ಭಾವನಾಮ

## ವಿಭಾಗ – 'ಸಿ'

## (ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)

55. **ಈ ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ :** $1 \times 3 = 3$

* ತಾಯಿಗಿಂತ ಬಂಧುವಿಲ್ಲ; ಉಪ್ಪಿಗಿಂತ ರುಚಿಯಿಲ್ಲ
* ಬೆಳೆಯುವ ಸಿರಿ ಮೊಳಕೆಯಲ್ಲಿ
* ಶಕ್ತಿಗಿಂತ ಯುಕ್ತಿ ಮೇಲು



https://www.karnatakaboard.com/

56. ನಿಮ್ಮನ್ನು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಶಾರದಾ ಪ್ರೌಢಶಾಲೆಯ 'ವಿನಾಯಕ' ಎಂದು ಭಾವಿಸಿಕೊಂಡು, 'ಶಾಲೆಯ ವಾರ್ಷಿಕೋತ್ಸವಕ್ಕೆ ಬರುವಂತೆ ಆಹ್ವಾನಿಸಿ ಹಾಸನ ಜಿಲ್ಲೆ ಬೆಳಗೊಳದ ನೃಪತುಂಗ ಪ್ರೌಢಶಾಲೆಯ 'ಸುರೇಶ' ಎಂಬ ಗೆಳೆಯನಿಗೆ ಪತ್ರವೊಂದನ್ನು ಬರೆಯಿರಿ. $1 \times 4 = 4$

**ಅಥವಾ**

ನಿಮ್ಮನ್ನು ಬೆಳಗಾವಿಯ ಸರ್ಕಾರಿ ಪ್ರೌಢಶಾಲೆಯ 'ಅನುಶ್ರೀ' ಎಂದು ಭಾವಿಸಿಕೊಂಡು, ಅಕ್ಕನ ಮದುವೆಯಲ್ಲಿ ಭಾಗವಹಿಸುವ ಕಾರಣ ನೀಡಿ ಮೂರು ದಿನಗಳ ರಜೆ ನೀಡುವಂತೆ ಶಾಲೆಯ ಮುಖ್ಯೋಪಾಧ್ಯಾಯರಿಗೊಂದು ಮನವಿ ಪತ್ರ ಬರೆಯಿರಿ.

57. **ಈ ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ :** $1 \times 4 = 4$

* ಮಹಿಳಾ ಜಾಗೃತಿ
* ಕ್ರೀಡೆಗಳ ಮಹತ್ವ
* ಸ್ವಚ್ಛ ಭಾರತ ಆಂದೋಳನದಲ್ಲಿ ಯುವ ಜನತೆಯ ಪಾತ್ರ



https://www.karnatakaboard.com/

https://www.karnatakaboard.com/